ಓಃಎಸ್ಃನಂ.114/2015

ಡಿ .ಡಬ್ಲ್ಯೂ- 1

**ದಿನಾಂಕಃ 31-10-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ** ವಾದಿ ಪರ ಶ್ರೀ ಎಸ್ ಎನ್ ಆರ್ **ವಕೀಲರಿಂದ**

ನೀವು ದಾವ ವಿಚಾರವನ್ನು ತಿಳಿದುಕೊಂಡಿರುತ್ತೀರಾ ಎಂದರೆ ಸಾಕ್ಷಿ ಹೌದು ಎಂದು ನುಡಿದಿರುತ್ತಾರೆ. ವಾದಿಯು ಯಾವ ಸ್ವತ್ತಿನ ಮೇಲೆ ದಾವೆ ಹೂಡಿರುತ್ತಾರೆಂದು ತಿಳಿದುಕೊಂಡಿರುತ್ತೀರಾ ಎಂದರೆ ತಿಳಿದುಕೊಂಡಿರುತ್ತೇನೆಂದು ನುಡಿದಿರುತ್ತಾರೆ. ಸರ್ವೆ ನಂ.43 ರ ಮೇಲೆ ವಾದಿ ದಾವೆ ಹೂಡಿರುತ್ತಾರೆಂದರೆ ಸಾಕ್ಷಿ ಹೌದು ಎಂದು ನುಡಿದಿರುತ್ತಾರೆ. ವಾದಿಯು ಈ ದಾವೆಯಲ್ಲಿ ಹೂಡಿರುವ ದಾಖಲಾತಿಗಳ ಬಗ್ಗೆ ತಿಳಿದುಕೊಂಡಿರುತ್ತೇನೆ. ದಾವ ಸ್ವತ್ತು ವಾದಿ ಮತ್ತು ಅವರ ಹೆಂಡತಿಯ ಹೆಸರಿನಲ್ಲಿ ತಲಾ 4 ಎಕರೆ ಇರುತ್ತದೆ ಎಂದರೆ ಸಾಕ್ಷಿ ಹೌದು ಎಂದು ನುಡಿದಿರುತ್ತಾರೆ. ವಾದಿ ಮತ್ತು ಅವರ ಹೆಂಡತಿಯ ಹೆಸರಿನಲ್ಲಿರುವ 8 ಎಕರೆ ಆಸ್ತಿಯ ಮೇಲೆ ದಾವ ಹೂಡಿರುತ್ತಾರೆಂದು ನುಡಿದಿರುತ್ತಾರೆ. ವಾದಿಯು ಯಾವ ಚಕ್ಕುಬಂದಿಯ ದಾವ ಸ್ವತ್ತಿನ ಮೇಲೆ ದಾವೆ ಹೂಡಿರುತ್ತಿರಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ.

ನಿಪಿ-1 ಮತ್ತು 2 ರ ದಾಖಲಾತಿಗಳಲ್ಲಿ ಯಾವ ಚಕ್ಕುಬಂದಿ ಇರುತ್ತದೆ ಎಂದು ತಿಳಿದುಕೊಂಡಿರುತ್ತಿರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿದಿರುತ್ತಾರೆ. ನಾನು ನಮ್ಮ ವಕೀಲರ ಕಡೆಯಿಂದ ದಾಖಲಾತಿಗಳ ಬಗ್ಗೆ ತಿಳಿದುಕೊಂಡಿದ್ದು, ನಮ್ಮ ಚಕ್ಕುಬಂದಿಗೂ ಅವರ ಚಕ್ಕುಬಂದಿಗೂ ವ್ಯತ್ಯಾಸ ಇರುತ್ತದೆ. ದಾವ ಸ್ವತ್ತಿನ ಪೂರ್ವಕ್ಕೆ ನಿರ್ವಾಣಪ್ಪನವರ ಜಮೀನು ಬರುತ್ತದೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿದಿರುತ್ತಾರೆ. ಪಶ್ಚಿಮಕ್ಕೆ ಮರುಳಪ್ಪನವರ ಜಮೀನು ಬರುತ್ತದೆ ಎಂದರೆ ಸಾಕ್ಷಿ ಇಲ್ಲ ಉತ್ತರಕ್ಕೆ ಶೇಖರಪ್ಪನವರ ಜಮೀನು ಬರುತ್ತದೆ ಎಂದರೆ ಇಲ್ಲ ಎಂದು ನುಡಿದಿರುತ್ತಾರೆ. ದಕ್ಷಿಣಕ್ಕೆ ಪರಮೇಶ್ವರಪ್ಪ ಮತ್ತು ಚೀರನಹಳ್ಳಿ ಬಸವಣ್ಣನವರ ಜಮೀನು ಬರುತ್ತದೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿದಿರುತ್ತಾರೆ. ನನ್ನ ತಕರಾರಿನಲ್ಲಿ ನನ್ನ ಜಮೀನಿನ ಚಕ್ಕುಬಂದಿಯನ್ನು ನಾನು

ತಿಳಿಸಿರುತ್ತೇನೆ. ಪ್ರತಿವಾದ ಪತ್ರದಲ್ಲಿರುವ ಸಹಿ ನನ್ನದೇ ಆಗಿರುತ್ತದೆ. ನಿಮ್ಮ ತಕರಾರಿನಲ್ಲಿ ನೀವು ಯಾವುದೇ ನಿಮ್ಮ ಚಕ್ಕುಬಂದಿಯನ್ನು ನಮೂದು ಮಾಡಿಲ್ಲ ಎಂದರೆ ಸಾಕ್ಷಿ ಮಾಡಿರುತ್ತೇನೆಂದು ನುಡಿದಿರುತ್ತಾರೆ. ನೀವು ನಿಮ್ಮ ತಕರಾರಿನಲ್ಲಿ ಯಾವುದೇ ಚಕ್ಕುಬಂದಿ ನಮೂದು ಮಾಡದೇ ಇದ್ದರೂ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದಿರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿದಿರುತ್ತಾರೆ. ನನ್ನ ತಕರಾರನ್ನು ಬರೆಸಲು ಮಾಹಿತಿಯನ್ನು ನಾನೇ ನಮ್ಮ ವಕೀಲರಿಗೆ ನೀಡಿರುತ್ತೇನೆ. ದಾವ ಸ್ವತ್ತಿಗೂ ನಿಮಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸಾಕ್ಷಿ ಇದೆ ಎಂದು ನುಡಿದಿರುತ್ತಾರೆ. ಸಂಬಂಧ ಇದೆ ಎಂದು ನಿಮ್ಮ ತಕರಾರಿನಲ್ಲಿ ಬರೆಸಿರುತ್ತಿರಾ ಎಂದರೆ ಸಾಕ್ಷಿ ಬರೆಸಿರುತ್ತೇನೆಂದು ನುಡಿದಿರುತ್ತಾರೆ.

ಪುಟ್ಟಮಲ್ಲಯ್ಯಪ್ಪ ಅಲಿಯಾಸ್ ಪುಟ್ಟಪ್ಪನವರು ನನ್ನ ತಂದೆಯ ತಂದೆ ಆಗಿರುತ್ತಾರೆಂದು ಯಾವ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾರುಪಡಿಸಿರುತ್ತಿರಾ ಎಂರದೆ ಸಾಕ್ಷಿ ಹಾಜರುಪಡಿಸಿಲ್ಲ ಎಂದು ನುಡಿದಿರುತ್ತಾರೆ ಹಾಗೂ ಅವರಿಗೆ ಇಬ್ಬರು ಹೆಂಡತಿ ಇರುವ ಬಗ್ಗೆ ದಾಖಲಿ ಹಾಜರುಪಡಿಸಿರುತ್ತಿರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿದಿರುತ್ತಾರೆ. ನೀವು ಗಂಗಾಧರಪ್ಪನವರ ಮಗ ಎಂದು ತೋರಿಸಲು ಯಾವ ದಾಖಲಾತಿ ಹಾಜರುಪಡಿಸಿರುತ್ತಿರಾ ಎಂದರೆ ಸಾಕ್ಷಿ ಹಾಜರುಪಡಿಸಿಲ್ಲ, ಈಗ ಹಾಜರುಪಡಿಸುತ್ತೇನೆಂದು ನುಡಿದಿರುತ್ತಾರೆ. ನೀವು ಹೇಳುವಂತೆ ತಹಶೀಲ್ದಾರ್ ರವರು ನೀಡಿದ ಆದೇಶದ ಬಗ್ಗ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಿರಾ ಎಂದರೆ ಸಾಕ್ಷಿ ಹೌದು ಎಂದು ನುಡಿದಿದ್ದು,ನಂತರ ನಮ್ಮ ವಕೀಲರಿಗೆ ನೀಡಿರುತ್ತೇನೆಂದು ನುಡಿದಿರುತ್ತಾರೆ. ನೀವು ನ್ಯಾಯಾಲಯಕ್ಕೆ ಸಲ್ಲಿಸಿರುವ ದಾಖಲಾತಿಗಳಲ್ಲಿ ತಹಶೀಲ್ದಾರ್ ರವರು ನೀಡಿದ ಆದೇಶ ಇರುವುದಿಲ್ಲ ಎಂದರೆ ಸಾಕ್ಷಿ ನಿಡಿ ದಾಖಲಾತಿಗಳನ್ನು ಪರಿಶೀಲಿಸಿ, ಅದರಲ್ಲಿ ಇರುವುದಿಲ್ಲ,

ಓಃಎಸ್ಃನಂ.114/2015

ಡಿ .ಡಬ್ಲ್ಯೂ- 1

ಆದರೆ ನಮ್ಮ ವಕೀಲರಿಗೆ ನೀಡಿರುತ್ತೇನೆಂದು ನುಡಿದಿರುತ್ತಾರೆ. ತಹಶೀಲ್ದಾರ್ ರವರ ಆದೇಶದ ಮೇರೆಗೆ ನೀವು ತಕರಾರನ್ನು ಸಲ್ಲಿಸಿರುತ್ತಿರಾ ಎಂದರೆ ಸಾಕ್ಷಿ ಹೌದು ಎಂದು ನುಡಿದಿರುತ್ತಾರೆ. ಆದ್ದರಿಂದ ಆ ದಾಖಲಾತಿಯನ್ನು ನೀವು ನ್ಯಾಯಾಲಯಕ್ಕೆ ಹಾಜರುಪಡಿಸದೇ ಇರುವ ಕಾರಣ ತಿಳಿಸಿರುತ್ತಿರಾ ಎಂದರೆ ಸಾಕ್ಷಿ ನಮ್ಮ ವಕೀಲರು ಹೇಳಬೇಕು ಎಂದು ನುಡಿದಿರುತ್ತಾರೆ. ತಹಶೀಲ್ದಾರ್ ರವರ ಆದೇಶದ ಮೇಲೆ ವಾದಿಯು ಮೇಲ್ಮನವಿ ಸಲ್ಲಿಸಿರುತ್ತಾರೆಂದರೆ ಸಾಕ್ಷಿ ಹೌದು ಎಂದು ನುಡಿದಿರುತ್ತಾರೆ.

ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

ಓ. ಕೇ. ಸ. ಇ. ಎ. ಒ.

ಸಹಿ/-

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು

**ಪ್ರ.ದ.ನ್ಯಾ.ದಂ.ರವರು,ತರೀಕೆರೆ.**